## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 145 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.02.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಇತ್ತೀಚೆಗೆ ಭೂಸರ್ವೆ ಅರ್ಜಿ ಶುಲ್ಕವನ್ನು ಅತಿ ಹೆಚ್ಚು ಮಾಡಿರುವುದರಿಂದ ಭೂಮಾಲೀಕರಿಗೆ ಹೆಚ್ಚು ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಆ)</td><td>ಈ ಪರಿಷ್ಕರಣಾ ಶುಲ್ಕ ಯಾವಾಗಿನಿಂದ ಜಾರಿಯಲ್ಲಿದೆ;</td><td>11ಇ ನಕ್ಷೆ, ಅಲಿನೇಶನ್ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ ಶುಲ್ಕ ಪರಿಷ್ಕರಣೆಯು ದಿನಾಂಕ: 01-01-2022 ರಿಂದ ಹಾಗೂ ಹದ್ದುಬಸ್ತು ಅರ್ಜಿ ಶುಲ್ಕ ಪರಿಷ್ಕರಣೆಯು ದಿನಾಂಕ:01-02-2022 ರಿಂದ ಜಾರಿಗೆ ಬಂದಿರುತ್ತದೆ.</td></tr>
<tr><td>ಇ)</td><td>ಈ ರೀತಿ ಏಕಾಏಕಿ ಅತಿ ಹೆಚ್ಚು ಶುಲ್ಕ ಹೆಚ್ಚಿಸಲು ಕಾರಣಗಳೇನು; (ವಿವರ ನೀಡುವುದು)</td><td rowspan="2">ಸಾರ್ವಜನಿಕರು ಅಳತೆ ಕೋರಿ ಸಲ್ಲಿಸುವ ಅರ್ಜಿಗಳ ಶುಲ್ಕವನ್ನು ಈ ಹಿಂದೆ ಸರ್ಕಾರವು ಆದೇಶ ಸಂಖ್ಯೆ ಕಂಇ 10 ಭೂದಾಸ 2014, ದಿನಾಂಕ 17-2-2014 ರಲ್ಲಿ ಪರಿಷ್ಕರಿಸಿತ್ತು. ನಂತರ ಸರ್ಕಾರದ ಆದೇಶ ಸಂಖ್ಯೆ ಕಂಇ 238 ಎಸ್ಎಸ್‌ಸಿ 2021, ದಿನಾಂಕ 09-02-2022 ರಲ್ಲಿ ಪುನರ್ ಪರಿಷ್ಕರಿಸಿದ್ದು, ಶುಲ್ಕ ಪರಿಷ್ಕರಣೆಯ ಹೋಲಿಕೆ ತಃಖ್ತೆ ಕೆಳಕಂಡಂತಿದೆ.
<table>
<tr><th colspan="2">ವಿವರ</th><th colspan="2">2014</th><th colspan="2">2022</th></tr>
<tr><th>ವಹಿವಾಟಿನ ತರಹೆ</th><th>ಜಮೀನು ಇರುವ ಪ್ರದೇಶ</th><th>2 ಎಕರೆ ವರೆವಿಗೂ</th><th>2 ಎಕರೆ ಗಿಂತ ಹೆಚ್ಚಿದ್ದಲ್ಲಿ ಪ್ರತಿ ಭಾಗಶಃ ಎಕರೆಗೆ</th><th>2 ಎಕರೆ ವರೆವಿಗೂ</th><th>ಪ್ರತಿ ಹೆಚ್ಚುವರಿ ಎಕರೆಗೆ ಶುಲ್ಕ</th></tr>
<tr><td rowspan="2">11ಇ,ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ</td><td>ನಗರೀಕೃತ</td><td>ರೂ.2000/-</td><td>ರೂ.200/-</td><td>ರೂ.2,500/</td><td>ರೂ.1000/-</td></tr>
<tr><td>ಗ್ರಾಮೀಣ</td><td>ರೂ.1200/-</td><td>ರೂ.100/-</td><td>ರೂ.1500/-</td><td>ರೂ. 400/-</td></tr>
<tr><td rowspan="2">ಹದ್ದುಬಸ್ತು</td><td>ನಗರೀಕೃತ</td><td colspan="2" rowspan="2">*ಪ್ರತಿ ಅರ್ಜಿಗೆ ( 4 ಸನಂ/ ಹಿ.ನಂ.ಗಳಿಗೆ) ರೂ. 35/- (*1970 ರ ದಶಕದಲ್ಲಿ ನಿಗದಿಪಡಿಸಿದ್ದು )</td><td>ರೂ.2,000/-</td><td>ರೂ. 400/-</td></tr>
<tr><td>ಗ್ರಾಮೀಣ</td><td>ರೂ.500/-</td><td>ರೂ. 300/-</td></tr>
</table>
ಸಾರ್ವಜನಿಕರಿಂದ ಸಂಗ್ರಹವಾಗುವ ಅರ್ಜಿ ಶುಲ್ಕದ ಹೆಚ್ಚಿನ ಪಾಲು ಅಳತೆ ಕಾರ್ಯ ನಿರ್ವಹಿಸುವ ಪರವಾನಗಿ ಭೂಮಾಪಕರಿಗೆ ನೀಡಲಾಗುತ್ತಿದೆ. ಈ ಹಿಂದೆ ಸರ್ಕಾರವು ಆದೇಶ ಸಂಖ್ಯೆ:ಕಂಇ 279 ಭೂದಾಸ 2011, ದಿನಾಂಕ 21-10-2013 ರಲ್ಲಿ ಪರವಾನಗಿ ಭೂಮಾಪಕರಿಗೆ ನೀಡುತ್ತಿದ್ದ ಸೇವಾ ಶುಲ್ಕವನ್ನು ರೂ.300/- ರಿಂದ</td></tr>
<tr><td>ಈ)</td><td>ಪರಿಷ್ಕರಣೆ ಮಾಡುವಾಗ ಅನುಸರಿಸಲಾಗಿರುವ ಮಾನದಂಡಗಳೇನು; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು)</td></tr>
</table>

| | | |
|---|---|---|
| | | ರೂ. 800/-ಕ್ಕೆ ಹೆಚ್ಚಿಸಲಾಗಿರುತ್ತದೆ. ಮತ್ತು ಬಹು ಮಾಲಿಕತ್ವದ ಪಹಣಿಗಳ ಬಾಬ್ತು ಹೆಚ್ಚುವರಿಯಾಗಿ ವಿಂಗಡಿಸಿದ ಪ್ರತಿ ಬ್ಲಾಕ್.ಗೆ ರೂ 150/- ನ್ನು ನಿಗಧಿಪಡಿಸಲಾಗಿತ್ತು. ಪ್ರಸ್ತುತ ಆದೇಶ ಸಂಖ್ಯೆ:ಕಂಇ 238 ಎಸ್‌ಎಸ್‌ಇ 2021, ದಿನಾಂಕ:10-1-2022 ರಲ್ಲಿ ಪ್ರತಿ ಅರ್ಜಿಯ ಅಳತೆಗೆ ರೂ 1200/- ಮತ್ತು ಅಳತೆ ಮಾಡಿದ ಪ್ರತಿ ಹೆಚ್ಚುವರಿ ಬ್ಲಾಕ್.ಗೆ ರೂ. 200/-ನ್ನು ನಿಗದಿಪಡಿಸಿದೆ. ಅಲ್ಲದೆ ಸರ್ಕಾರದ ಆದೇಶ ಸಂಖ್ಯೆ: ಕಂಇ 130 ಎಸ್‌ಎಸ್‌ಸಿ 2021, ದಿನಾಂಕ: 11-02-2022 ರಲ್ಲಿ ಪರವಾನಗಿ ಭೂಮಾಪಕರಿಗೂ ಸಹಾ ಹದ್ದುಬಸ್ತು ಅರ್ಜಿಗಳನ್ನು ಹಂಚಿಕೆ ಮಾಡಲು ಆದೇಶಿಸಿದೆ.<br>ಗ್ರಾಮೀಣ ಪ್ರದೇಶದ ಹದ್ದುಬಸ್ತು ಅರ್ಜಿಗಳಿಗೆ ರೂ 500/-ನ್ನು ನಿಗಧಿಪಡಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ 238 ಎಸ್‌ಎಸ್‌ಸಿ 2021, ದಿನಾಂಕ: 10-1-2022 ರಲ್ಲಿ ಪರವಾನಗಿ ಭೂಮಾಪಕರಿಗೆ ಪ್ರತಿ ಅರ್ಜಿಗೆ 1200/- ನೀಡಲು ನಿಗಧಿಪಡಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಂದ ಸಂಗ್ರಹವಾಗುವ ಅರ್ಜಿ ಶುಲ್ಕದ ಹೆಚ್ಚಿನ ಪಾಲು ಅಳತೆ ಕಾರ್ಯ ನಿರ್ವಹಿಸುವ ಪರವಾನಗಿ ಭೂಮಾಪಕರಿಗೆ ನೀಡಲಾಗುತ್ತಿದೆ. ಸಂಗ್ರಹವಾದ ಶುಲ್ಕದಿಂದ ಪರವಾನಗಿ ಭೂಮಾಪಕರಿಗೆ ಸೇವಾ ಶುಲ್ಕವನ್ನು ನೀಡುವುದರೊಂದಿಗೆ ಮೋಜಿಣಿ ವ್ಯವಸ್ಥೆಯ ಪರಿಕರಗಳ ನಿರ್ವಹಣೆ ಮತ್ತು ಆಡಳಿತಾತ್ಮಕ ವೆಚ್ಚವನ್ನು ಸಹ ಭರಿಸಲಾಗುತ್ತಿದೆ.<br>ಈ ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಮೋಜಣಿ ವ್ಯವಸ್ಥೆಯಡಿ ಸಲ್ಲಿಸುವ ಅರ್ಜಿಗಳ ಅಳತೆ ಶುಲ್ಕವನ್ನು ಹೆಚ್ಚಿಸಲಾಗಿದೆ. |
| ಉ) | ಇದನ್ನು ಪುನರ್ ಪರಿಷ್ಕರಿಸಿ, ಶುಲ್ಕ ಕಡಿಮೆ ಮಾಡಲು ಸರ್ಕಾರ ಚಿಂತಿಸುವುದೇ? | ಸರ್ಕಾರದ ಆದೇಶ ಸಂಖ್ಯೆ: ಕಂಇ 238 ಎಸ್‌ಎಸ್‌ಸಿ 2021, ದಿನಾಂಕ:23-12-2021 ರಲ್ಲಿ 11ಇ ನಕ್ಷೆ, ಅಲಿನೇಶನ್ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ ಶುಲ್ಕವನ್ನು ಗ್ರಾಮೀಣ ಪ್ರದೇಶದಲ್ಲಿ ರೂ.2000/-ಕ್ಕೆ ಹೆಚ್ಚಿಸಲಾಗಿತ್ತು. ಈ ಆದೇಶವನ್ನು ಮರು ಪರಿಶೀಲಿಸಿ, ದಿನಾಂಕ: 9-02-2022 ರ ಸರ್ಕಾರದ ಆದೇಶದಲ್ಲಿ ಈ ಮೊತ್ತವನ್ನು ರೂ.1500/- ಕ್ಕೆ ಕಡಿಮೆಗೊಳಿಸಲಾಗಿದೆ. ಹಾಗೆಯೇ, ಸರ್ಕಾರದ ದಿನಾಂಕ:19-01-2022 ರ ಆದೇಶದಲ್ಲಿ ಹದ್ದುಬಸ್ತು ಶುಲ್ಕವನ್ನು ಗ್ರಾಮೀಣ ಪ್ರದೇಶದಲ್ಲಿ ರೂ.1500/-ಕ್ಕೆ ಹೆಚ್ಚಿಸಿರುವುದನ್ನು ಮರು ಪರಿಶೀಲಿಸಿ, ಸರ್ಕಾರದ ಅದೇಶ ಸಂಖ್ಯೆ: ಕಂಇ 238 ಎಸ್‌ಎಸ್‌ಸಿ 2021, ದಿನಾಂಕ:09-02-2022 ರಲ್ಲಿ ರೂ.500/- ಕ್ಕೆ ಕಡಿಮೆಗೊಳಿಸಲಾಗಿದೆ. |

<u>**ಸಂಖ್ಯೆ: ಕಂಇ 15 ಎಸ್‌ಎಸ್‌ಸಿ 2022**</u>

**(ಆರ್.ಅಶೋಕ)**
ಕಂದಾಯ ಸಚಿವರು